ಅ) ಬ್ರಹ್ಮಲಿಂಗ ಪ್ರೌಢಶಾಲೆ, ಸುಳಗೆ (ಹೆಚ್) ಬೆಳಗಾಂ

ಆ) ಗುರುವರ್ಯ ಶ್ಯಾಮರಾವ್ ದೇಸಾಯಿ ಪ್ರೌಢಶಾಲೆ, ಇದ್ದಲಹೊಂಡ

ಇ) ಶ್ರೀ ಕಾಡಸಿದ್ದೇಶ್ವರ ಪ್ರೌಢಶಾಲೆ, ಗುಂಡೇವಾರಿ, ಅಥಣಿ ತಾಲ್ಲೂಕು

ಈ) ಶಾರದ ಬಾಲಕಿಯರ ಪ್ರೌಢಶಾಲೆ, ಹಲಗ, ಬೆಳಗಾಂ

3. ಮೇಲೆ ತಿಳಿಸಲಾಗಿರುವ ಪ್ರೌಢಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಸರ್ಕಾರಿ ಆದೇಶ ಸಂಖ್ಯೆ : ಇಡಿ 759 ಎಸ್‌ಇಎಸ್ 91 ದಿನಾಂಕ : 12-8-91ರ ಮೇರೆಗೆ ಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಜಿಲ್ಲಾ ಪರಿಷತ್ತುಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.

ಆ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಂದ ಸದರಿ ಪ್ರೌಢಶಾಲೆಗಳನ್ನು ಮುಂಗಡ ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿದ್ದು ಅನುದಾನ ಸಂಹಿತೆ ನಿಯಮಗಳನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಕಾವೇರಿ ಟ್ರಿಬ್ಯುನಲ್ ವಿವಾದ.

73 (239) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಟ್ರಿಬ್ಯುನಲ್ ವಿವಾದ ಯಾವ ಹಂತದಲ್ಲಿದೆ ?

ಆ) ಈ ವಿವಾದದ ಬಗ್ಗೆ ಸರ್ಕಾರದವರ ನಿಲುವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ವಿವಾದಕ್ಕೆ ಸಂಬಂಧಪಟ್ಟ ಎಲ್ಲಾ ರಾಜ್ಯಗಳು ತಮ್ಮ ಹೇಳಿಕೆಗಳನ್ನು ಹಾಗೂ ಅದನ್ನು ಬೆಂಬಲಿಸುವ ದಾಖಲೆಗಳನ್ನು ನ್ಯಾಯ ಮಂಡಲಿಗೆ ಸಲ್ಲಿಸಿದೆ. ತಮಿಳುನಾಡು, ಪಾಂಡಿಚೆರಿ ಮತ್ತು ಕೇರಳ ರಾಜ್ಯಗಳು ವಿವಾದದ ಬಗ್ಗೆ ತಮ್ಮ ಮೊದಲ ಹೇಳಿಕೆಯನ್ನು ಮಂಡಿಸಿವೆ. ಕರ್ನಾಟಕವು ದಿನಾಂಕ 20-1-1993ರಂದು ಮೊದಲ ಹೇಳಿಕೆಯನ್ನು ಮಂಡಿಸಬೇಕಾಗಿದೆ.

ಆ) ನ್ಯಾಯ ಮಂಡಲಿಯ ಮುಂದೆ ರಾಜ್ಯದ ವಾದದ ಸಕ್ರಿಯ ಮಂಡನೆ ಮತ್ತು ಮಾತುಕತೆಯಿಂದ ವಿವಾದ ಬಗೆಹರಿಸುವುದರಲ್ಲಿ ತೀವ್ರ ಪ್ರಯತ್ನ.

ಕೃಷ್ಣಾ ಜಲಾನಯನದ ಪ್ರದೇಶದಲ್ಲಿ ಕಾಮಗಾರಿ ಕೆಲಸಗಳಿಗೆ ಮಾಡಲಾದ ವೆಚ್ಚ

76 (243) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;